ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಮಂಗಳವಾರ, ದಿನಾಂಕ : 23ನೇ ಜುಲೈ, 2019

ವೈದ್ಯಕೀಯ ಸೀಟುಗಳ ಕುರಿತು

ಶ್ರೀ ರವಿಕುಮಾರ್. ಎನ್ (ವಿಧಾನಸಭೆಯಿಂದ ಚುನಾಯಿತರಾದವರು) :-

531 (496) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2018-19ನೇ ಸಾಲಿನಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಉಳಿದ 466 ವೈದ್ಯಕೀಯ ಸೀಟುಗಳನ್ನು ಯಾವ ಯಾವ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗೆ ಹಿಂತಿರುಗಿಸಲಾಗಿದೆ; (ಕಾಲೇಜುವಾರು ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಉಳಿದ 466 ವೈದ್ಯಕೀಯ ಸೀಟುಗಳನ್ನು ಯಾವ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳಲಾಗಿದೆ; ಈ ವಿದ್ಯಾರ್ಥಿಗಳಲ್ಲಿ ರಾಜ್ಯದ ವಿದ್ಯಾರ್ಥಿಗಳೆಷ್ಟು; ಅನ್ಯ ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಅವರು ಗಳಿಸಿದ ನೀಟ್ ರ್ಯಾಂಕ್ ಮತ್ತು ಅಂಕಗಳೊಂದಿಗೆ ಯಾವ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಸೀಟು ಪಡೆದಿರುತ್ತಾರೆ ಎಂಬ ಕುರಿತು ಮಾಹಿತಿ ನೀಡುವುದು)

(ಇ) 2018-19ನೇ ಸಾಲಿನಲ್ಲಿ ವೈದ್ಯಕೀಯ ಪ್ರವೇಶಕ್ಕಾಗಿ ಸಂದರ್ಶನಕ್ಕೆ ಹಾಜರಾಗಿರುವ ಯಾವ ರ್ಯಾಂಕಿನ ವಿದ್ಯಾರ್ಥಿಯವರೆಗೆ ಪ್ರವೇಶ ದೊರಕಿದೆ; Sಅ/Sಖಿ, ಔಃಅ, ಉಓಐ ಆಭ್ಯರ್ಥಿಗಳಲ್ಲಿ ಯಾವ ರ್ಯಾಂಕಿನ ಅಭ್ಯರ್ಥಿಯವರೆಗೆ ಪ್ರವೇಶಾವಕಾಶ ದೊರಕಿದೆ;

(ಈ) 2018-19ನೇ ಸಾಲಿನಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಉಳಿದ 466 ವೈದ್ಯಕೀಯ ಸೀಟುಗಳನ್ನು ಆಡಳಿತ ಮಂಡಳಿಗೆ ಹಿಂತಿರುಗಿಸಿದ ಬಳಿಕ ಯಾವ ರ್ಯಾಂಕಿನ ವಿದ್ಯಾರ್ಥಿವರೆಗೆ ಪ್ರವೇಶಾವಕಾಶ ದೊರಕಿದೆ; SC/ST, OBC, GNL ಅಭ್ಯರ್ಥಿಗಳಲ್ಲಿ ಯಾವ rankಕಿನ ಅಭ್ಯರ್ಥಿಯವರೆಗೆ ಪ್ರವೇಶಾವಕಾಶ ದೊರಕಿದೆ ?